
ಸ್ತಂಭ – ಅನುವಂಶಿಕವಾದದಂತೆ ನಿರಂತರವಾಗಿ ಮುಂದುವರೆಯುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಕಾಯಕದ ಆಧಾರದ ಮೇಲೆ ವರ್ಗೀಕರಣ ಇಲ್ಲವೆಂದು ವಾದಿಸುವುದು ಸರಿಯಲ್ಲ ಎಂದು ವಿಲ್ಕರ್ಸನ್ ಹೇಳುತ್ತಾರೆ. ಕಪ್ಪು ಜನರೂ ದೈಹಿಕ ಕಾಯಕವೇ ಮುಖ್ಯವಾಗಿದ್ದ ಕೃಷಿ, ಮನೆಗೆಲಸದಂತಹ ಕೆಲವೇ ಉದ್ಯೋಗಗಳಿಗೆ ಸೀಮಿತವಾಗಿದ್ದಾರೆಂದು ವಾದಿಸುತ್ತಾರೆ. ಅತ್ಯಂತ ಶ್ರೀಮಂತಿಕೆಯನ್ನು ಪಡೆದು ಪ್ರಭಾವಿಗಳಾಗಿರುವ ಕಪ್ಪು ಜನರೂ ಹೆಚ್ಚಿನಂಶ ದೈಹಿಕಮೂಲದ (ಆಟೋಟ, ನೃತ್ಯ, ಮನರಂಜನೆ) ಕಾಯಕದಲ್ಲಿಯೇ ತಮ್ಮ ಸಾಫಲ್ಯವನ್ನು ಪಡೆದಿದ್ದಾರೆ ಎಂದು ಹೇಳುತ್ತಾರೆ.

ಅಮಾನವೀಯತೆ (ಅಥವಾ ಘನತೆರಾಹಿತ್ಯ) ಮತ್ತು ಕಳಂಕ ಹಚ್ಚುವುದು; ಕ್ರೌರ್ಯ ಮತ್ತು ಬಲಪ್ರಯೋಗ, ಹಾಗೂ ಸಹಜವಾಗಿ ಉತ್ತಮ–ಅಧಮ ಎನ್ನುವ ಬೈನರಿಯಲ್ಲಿ ವರ್ಗೀಕರಿಸುವುದು; ಈ ಮಿಕ್ಕ ಮೂರು ಸ್ತಂಭಗಳ ಬಗ್ಗೆಯೂ ಆಕೆ ಚರ್ಚಿಸುತ್ತಾರೆ.




ಅಂಬೇಡ್ಕರ್ ಕೊಡುವ ಚಾರಿತ್ರಿಕ ಮತ್ತು ಪರಂಪರೆಯ ವಾದಗಳನ್ನು ವಿಸ್ತೃತ ನೆಲೆಯಲ್ಲಿ ನೋಡಿದಾಗ ಅವೇ ಸಿದ್ಧಾಂತಗಳು ಭಿನ್ನ ರೂಪದಲ್ಲಿ ಬೇರೆಡೆಯೂ ಇರುವುದನ್ನು ವಿಲ್ಕರ್ಸನ್ ಉದಾಹರಿಸುತ್ತಾರೆ. ವಿಲ್ಕರ್ಸನ್ ವಾದ ನಿಜಕ್ಕೂ ಅಂಬೇಡ್ಕರ್ ವಾದವನ್ನು ವಿಶ್ವದ ನೆಲೆಯಲ್ಲಿ ಅನ್ವಯಿಸುವ ಪ್ರಯತ್ನ ಮಾಡುತ್ತದೆ. ಈ ನೆಲೆಯಲ್ಲಿ ಆಕೆ ಜನಾಂಗ ಮತ್ತು ವರ್ಣಭೇದವನ್ನು ಹಿನ್ನೆಲೆಗೆ ಅಟ್ಟಿ ಅದನ್ನು ಜಾತಿಯ ನೆಲೆಯಲ್ಲಿಯೇ ನೋಡಲು ಪ್ರಯತ್ನಿಸುತ್ತಾರೆ. ಹೀಗೆ ನಾವು ವಿಶ್ವದ ಚೌಕಟ್ಟಿನಲ್ಲಿ ನೋಡಿದಾಗ ಈ ಸಮಸ್ಯೆ ಭಾರತಕ್ಕೆ ಪರಿಮಿತವಾದದ್ದಲ್ಲ ಎನ್ನುವುದು ಗೋಚರಿಸುತ್ತದೆ. ಈ ಭೇದಭಾವವನ್ನು ಸಮರ್ಥಿಸಲು ಬಳಸುವ ವಾದ ಮತ್ತು ಪರಿಕರಗಳೂ ಎಲ್ಲೆಡೆಯೂ ಇವೆ. ನಾವು ಮೂಲನಿವಾಸಿಗಳನ್ನು ಆದಿವಾಸಿಗಳೆಂದು ಕರೆದರೆ ಅಲ್ಲಿ 'ಅಬೊರಿಜಿನಲ್ಸ್' ಆಗುತ್ತಾರೆ. ದಾಳಿ ಮಾಡಿ ಆಕ್ರಮಿಸಿಕೊಂಡು ನೆಲೆನಿಂತವರು ಗೂಟವೂರಿ ತಮ್ಮ ಬಾವುಟವನ್ನು ಹಾರಿಸಿ ಜಮೀನಿಗೆ ಒಂದು ಚೌಕಟ್ಟನ್ನು ಹಾಕಿ ಜಮೀನುದಾರರಾದರೆ, ಹೊರಗುಳಿದವರು ದಲಿತರಾಗುತ್ತಾರೆ. ಅಥವಾ ಕಪ್ಪು ಜನರಾಗುತ್ತಾರೆ. ಅವರುಗಳನ್ನು ಹೊರಜನರಾಗಿ ಉಳಿಸಿ ಊಳಿಗ ಬಯಸುವುದು ಮತ್ತು ಅವರ ಭಿನ್ನತೆಯನ್ನೇ ಶೋಷಣೆಯ ಪರಿಕರವನ್ನಾಗಿ ಉಪಯೋಗಿಸುವುದು ಭಾರತ ಮತ್ತು ಹಿಂದೂ ಸಮಾಜಕ್ಕೆ ಸೀಮಿತವಾಗಿಲ್ಲ ಎನ್ನುವುದನ್ನು ವಿಲ್ಕರ್ಸನ್ ಶಕ್ತಿಯುತವಾಗಿ ವಾದಿಸುತ್ತಾರೆ.

ಭಾರತಕ್ಕೆ ಬಂದಿದ್ದ ವಿಲ್ಕರ್ಸನ್ ಅಮೆರಿಕಕ್ಕೆ ವಾಪಸ್ಸಾದಾಗ ನಡೆದ ಘಟನೆಯೊಂದಿಗೆ ಈ ಲೇಖನವನ್ನು ಮುಗಿಸಬಹುದು. ಎಂದಿನಂತೆ ಸೂಟ್‌ಕೇಸು ಎಕ್ಸರೇ ಯಂತ್ರದಲ್ಲಿ ಹೋಗುತ್ತದೆ. ಸೂಟ್‌ಕೇಸಿನಲ್ಲೇನಿದೆ ಎನ್ನುವುದು ಎಷ್ಟು ಮುಖ್ಯವೋ, ಅದರ ಮಾಲೀಕರು ಯಾರೆನ್ನುವುದೂ ಅಷ್ಟೇ ಮುಖ್ಯ. ತಮ್ಮ ಲಗೇಜು ತೀವ್ರವಾದ ಪರೀಕ್ಷೆಗೆ ಒಳಪಡುವುದು ಅಭ್ಯಾಸವಾಗಿರುವ ವಿಲ್ಕರ್ಸನ್ ತಮ್ಮ ಸೂಟ್‌ಕೇಸನ್ನು ತೆರೆಯುತ್ತಾರೆ. ಅದನ್ನು ಪರೀಕ್ಷೆಗೆ ಒಳಪಡಿಸುತ್ತಿರುವ ಕಪ್ಪು ಅಧಿಕಾರಿ ಎಲ್ಲವನ್ನೂ ಎಳೆದು ಒಂದು ಸಣ್ಣ ಪೆಟ್ಟಿಗೆಯನ್ನು ಕೈಲಿಹಿಡಿದು, 'ನೋಡಿ, ಇದೇ ನಮಗೆ ಅನುಮಾನ ತರಿಸಿದ್ದು. ಇದನ್ನು ತೆಗೆಯಿರಿ' ಎನ್ನುತ್ತಾನೆ. ಒಳಗೆ ಅಂಬೇಡ್ಕರ್ ಪ್ರತಿಮೆಯಿದೆ. 'ಯಾರ ಪ್ರತಿಮೆಯಿದು?' ಎಂದು ಕೇಳುತ್ತಾನೆ. ಹೇಗೆ ವಿವರಿಸುವುದೆಂದು ತಿಳಿಯದೇ ಕಡೆಗೆ, 'ಭಾರತ ದೇಶದ ಮಾರ್ಟಿನ್ ಲೂಥರ್ ಕಿಂಗ್' ಎನ್ನುತ್ತಾರೆ. ಆ ಮಾತು ಕೇಳಿದಾಕ್ಷಣ ಆ ಅಧಿಕಾರಿ ಗೌರವಪೂರ್ವಕವಾಗಿ ಪ್ರತಿಮೆಯನ್ನು ಸೂಟ್‌ಕೇಸಿನಲ್ಲಿಟ್ಟು ಆಕೆಯನ್ನು ಕಳುಹಿಸಿಕೊಡುತ್ತಾನೆ.

ಜಾತಿವ್ಯವಸ್ಥೆ, ಅಸ್ಪೃಶ್ಯತೆ, ಭೇದಭಾವ ನಮಗೆ ಸೀಮಿತವಾದದ್ದಲ್ಲ. ಆದರೆ ಚಾರಿತ್ರಿಕ ಸಂದರ್ಭಗಳು, ಪರಿಸ್ಥಿತಿಗಳು ಭಿನ್ನ. ಅಷ್ಟೇ. ●